**ದಿನಾಂಕಃ 15-12-2023 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಪ್ರತಿವಾದಿ ಪರ ಶ್ರೀ ಎಸ್ ಆರ್ ಎನ್ ವಕೀಲರಿಂದ**

1) 15 ರಿಂದ 20 ವರ್ಷಗಳ ಕಾಲ ನಾನು ನಮ್ಮ ಅಮ್ಮ ಮತ್ತು ಕುಟುಂಬದವರು ಕಾಫಿ ಎಸ್ಟೇಟ್ ನಲ್ಲಿ ವಾಸವಿದ್ದೆವು ಎಂದರೆ ಸರಿಯಲ್ಲ. ಹರಿಹರದಲ್ಲೂ ಸಹ 15 ರಿಂದ 20 ವರ್ಷಗಳ ಕಾಲ ನಾನು ನಮ್ಮ ಅಮ್ಮ ಮತ್ತು ಕುಟುಂಬದವರು ವಾಸವಿದ್ದೆವು ಎಂದರೆ ಸರಿಯಲ್ಲ. ನನಗೆ ಓದಲಿಕ್ಕೆ ಬರೆಯಲಿಕ್ಕೆ ಬರುವುದಿಲ್ಲ. ನಾವು ಬಗರ ಹುಕುಂ ಜಮೀನು ಮಂಜೂರು ಮಾಡಲು ಅರ್ಜಿ ಹಾಕಿದ್ದೆವು, ಮಂಜ್ಯನಾಯ್ಕ ಸಹ ಅರ್ಜಿ ಹಾಕಿದ್ದ ಎಂದು ಹೇಳುತ್ತಾರೆ. ಪ್ರತಿವಾದಿಗಳ ಅಕ್ಕಪಕ್ಕ ನಮ್ಮದು ಯಾವುದೇಜಮೀನು ಇಲ್ಲ ಹಾಗೂ ನಾವು ಸಾಗುವಳಿ ಮಾಡುತ್ತಿದ್ದೆವು ಮತ್ತು ಅರ್ಜಿ ಹಾಕಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ಸಹ ನಮ್ಮಂತೆ ಗದ್ದೆ ಕೆಲಸ ಮಾಡುವವರು ಎಂದು ಹೇಳುತ್ತಾರೆ ಪ್ರತಿವಾದಿಯರು ಹಣವಂತರು ಅಲ್ಲ ಎಂದರೆ ಸರಿ. ಪ್ರತಿವಾದಿಯರು ರಾಜಕೀಯದಲ್ಲಿ ಸಕ್ರಿಯವಾಗಿ ಇರುವುದಿಲ್ಲ. ಪ್ರತಿವಾದಿಯರು ರಾಜಕೀಯ ಪಕ್ಷದಲ್ಲಿ ಯಾವುದೇ ಪ್ರಭಾವೀ ಹುದ್ದೆ ಹೊಂದಿಲ್ಲ ಎಂದರೆ ಸರಿ.

2) ದಾವಾ ಆಸ್ತಿಯ ಚಕ್ಕುಬಂದಿ ಏನು ಎಂದರೆ ಸಾಕ್ಷಿಯು ಪೂರ್ವಕ್ಕೆ ಸೋಮ್ಲನಾಯ್ಕನ ಜಮೀನು, ಪಶ್ಚಿಮಕ್ಕೆ - ಮಾದರ ತಿಪ್ಪಣ್ಣನ ಜಮೀನು ಹಾಗೂ ಒಂದು ಕಡೆ ರೋಡ್ ಮತ್ತೊಂದು ಕಡೆ ಸೋಲಪ್ಪನ ಜಮೀನು ಇರುತ್ತದೆ ಎಂದು ಹೇಳುತ್ತಾರೆ, ಅದರ ಮಧ್ಯೆ ನಮ್ಮ ಜಮೀನು ಇದೆ.

3) ಪ್ರತಿವಾದಿಗಳು ಸುಮಾರು 75 ವರ್ಷಗಳಿಂದ 5 ಎಕರೆ ಜಮೀನನ್ನು ಸರ್ವೆ ನಂ 72 ರಲ್ಲಿ ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿ. ನಾವು ಸಹ ನಮ್ಮ ಅಜ್ಜ ಅಜ್ಜಿಯರ ಕಾಲದಿಂದ ಸಾಗುವಳಿ ಮಾಡುತ್ತಾ ಬಂದಿದ್ದೇವೆ ಎಂದು ಹೇಳುತ್ತಾರೆ. ನಮಗೆ ಪ್ರತಿವಾದಿಗಳ ಜಮೀನಿನ ಪಕ್ಕ ಯಾವುದೇ ಜಮೀನು ಇಲ್ಲ ಹಾಗೂ ನಾವು ಅಜ್ಜ ಅಜ್ಜಿಯರ ಕಾಲದಿಂದ ಸದರಿ ಜಮೀನನ್ನು ಸಾಗುವಳಿ ಮಾಡುತ್ತಾ ಬಂದಿದ್ದೇವೆ ಎಂದು ಸುಳ್ಳು ಹೇಳುತ್ತಿದ್ದೇನ ಎಂದರೆ ಸರಿಯಲ್ಲ.

4) ಪ್ರತಿವಾದಿಗಳು ಅವರ ಜಮೀನಿಗೆ ಕಂದಾಯ ಕಟ್ಟುತ್ತಾ ಬಂದಿರುತ್ತಾರೆ ಹಾಗೂ ಕಂದಾಯದ ದಾಖಲೆಗಳು ಇರುತ್ತವೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಅವರು ಮಾಡಿಸಿರಬಹುದು ಎಂದು ಹೇಳುತ್ತಾರೆ. ಪ್ರತಿವಾದಿಯರ ಹೆಸರು ಪಹಣಿ ಪತ್ರಿಕೆ ಯ 12 ನೇ ಕಾಲಂನಲ್ಲಿ ಇರುತ್ತದೆ ಎಂದರೆ ಸಾಕ್ಷಿಯು ನಕಲಿ ಪಹಣಿ ಪತ್ರಿಕೆ ಮಾಡಿ ನಮ್ಮದೇ ಜಮೀನು ಎಂದು ನಮಗೆ ಹೆದರಿಸಿದ್ದರಿಂದ ನಾನು ನ್ಯಾಯಾಲಯಕ್ಕೆ ಬಂದಿದ್ದೇನೆ ಎಂದು ಹೇಳುತ್ತಾರೆ. ಈ ದಾವೆಯನ್ನು ನಾನು 2016 ನೇ ಇಸವಿಯಲ್ಲಿ ಹಾಕಿದ್ದೇನೆ ಎಂದರೆ ಸರಿ. ಪ್ರತಿವಾದಿಗಳ ಹೆಸರು ಪಹಣಿ ಪತ್ರಿಕೆಯಲ್ಲಿ 1989 ನೇ ಇಸವಿಯಿಂದ ಕಾಲಂ ನಂ 12 ರಲ್ಲಿ ನಮೂದು ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಅಕ್ಕಪಕ್ಕದ ಜಮೀನುಗಳನ್ನು ಸೇರಿಸಿಕೊಂಡು 4 ಎಕರೆ ಜಮೀನು ಸಾಗುವಳಿ ಮಾಡುತ್ತಿದ್ದಾರೆ ಎಂದು ಕಂದಾಯ ದಾಖಲೆಗಳು ಇವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ನಾನು ಗದ್ದೆ ಕೆಲಸ ಮಾತ್ರ ಮಾಡುತ್ತಿದ್ದೆ ಎಂದು ಹೇಳುತ್ತಾರೆ. ಪ್ರತಿವಾದಿಯರು ಅಕ್ಕಪಕ್ಕದ ಜಮೀನನ್ನು ಎಲ್ಲಾ ಸೇರಿಕೊಂಡು ಒಟ್ಟು 5 ಎಕರೆ ಜಮೀನು ಸ್ವಾಧೀನ ಹೊಂದಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸಾಕ್ಷಿಯು

ಊರಿನವರು ಹೇಳಿದಂತೆ ನಾವು ಅರ್ಧ ಹಾಗೂ ಪ್ರತಿವಾದಿಗಳು ಅರ್ಧ ಜಮೀನನ್ನು ಸಾಗುವಳಿ ಮಾಡುತ್ತಾ ಮೊದಲಿನಿಂದಲೂ ಬಂದಿರುತ್ತೇವೆ ಎಂದು ಹೇಳುತ್ತಾರೆ. ನಾವು ಅರ್ಧ ಹಾಗೂ ಪ್ರತಿವಾದಿಗಳು ಅರ್ಧ ಜಮೀನನ್ನು ಸಾಗುವಳಿ ಮಾಡುತ್ತಾ ಮೊದಲಿನಿಂದಲೂ ಬಂದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನ ಎಂದರೆ ಸರಿಯಲ್ಲ. ದಿನಾಂಕ 17-04-1989 ರಂದು ಪ್ರತಿವಾದಿಯರು ಸದರಿ ಜಮೀನಿಗೆ ಟಿ ಟಿ , ಜುಲ್ಮಾನೆ ಹಾಗೂ ಇತರೆ ಕರ ಒಳಗೊಂಡಂತೆ ಒಟ್ಟು ರೂ 550-00 ಹಣವನ್ನು ಸರ್ಕಾರಕ್ಕೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು ನಮಗೆ ಕಟ್ಟುವುದು ಗೊತ್ತಿರಲಿಲ್ಲ ಈಗಲೂ ಸಹ ನಾವು ಕಟ್ಟಲು ತಯಾರಿದ್ದೇವೆ ಎಂದು ಹೇಳುತ್ತಾರೆ. ನಮ್ಮದು ಅಲ್ಲಿ ಜಮೀನು ಇಲ್ಲದೇ ಇದುದರಿಂದ ನಾವು ಹಣವನ್ನು ಕಟ್ಟಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು 5 ಎಕರೆ ಜಮೀನು ಮಂಜೂರು ಮಾಡಲು ಸರ್ಕಾರಕ್ಕೆ ಅರ್ಜಿ ನಮೂನು 53 ರಲ್ಲಿ ಸಲ್ಲಿಸಿದ್ದಾರೆ ಎಂದರೆ ಸಾಕ್ಷಿ ನಾವು ಅರ್ಜಿ ಸಲ್ಲಿಸಿರುತ್ತೇವೆ ಎಂದು ಹೇಳುತ್ತಾರೆ.

3) ಪ್ರತಿವಾದಿಯರು 1989 ನೇ ಇಸವಿಯಿಂದ 5 ಎಕೆರ ಜಮೀನು ಸ್ವಾಧೀನ ಹೊಂದಿ ಉಳಿಮೆ ಮಾಡುತ್ತಾ ಬಂದಿರುತ್ತಾರೆ ಎಂದರೆ ಸಾಕ್ಷಿಯು ನಾವು ಮಾಡುತ್ತಾ ಬಂದಿರುತ್ತೇವೆ ಎನ್ನುತ್ತಾರೆ. ತಹಶೀಲ್ದಾರ ರವರು ಪ್ರತಿವಾದಿಗಳ ಜಮೀನನ್ನು ಎಲ್ ಎನ್ ಡಿ ಸಿ ಆರ್ 19/2005-06 ರಂತೆ ಸ್ಥಳ ಪರೀಶಿಲನೆ ಮಾಡಿ ಅಹವಾಲು ತಖ್ತೆ ತಯಾರಿಸಿರುತ್ತಾರೆ ಎಂದರೆ ಸಾಕ್ಷಿಯು ನಾವು ಸಹ ತಹಶೀಲ್ದಾರರ ಕಚೇರಿಗೆ ಹೋಗಿದ್ದೇವು ಹಾಗೂ ಶುಲ್ಕ ಕಟ್ಟುತ್ತೇವೆ ಎಂದು ಹೇಳಿದಾಗ ಮಂಜನಾಯ್ಕ ಕಟ್ಟಿದ್ದಾರೆ ಎಂದು ನಮಗೆ ಹೊರಗೆ ಕಳುಹಿಸಿದರು ಎಂದು ಹೇಳುತ್ತಾರೆ. ನಮ್ಮದು

ಜಮೀನು ಇಲ್ಲದೇ ಇದುದರಿಂದ ತಹಶೀಲ್ದಾರವರು ನಮ್ಮ ಹಣವನ್ನು ಕಟ್ಟಿಸಿಕೊಂಡ್ಲಿ ಎಂದರೆ ಸರಿಯಲ್ಲ.  ಸಾಕ್ಷಿಯು ಮುಂದುವರೆದು ನಮ್ಮನ್ನು ಮಂಜ್ಯನಾಯ್ಕನನ್ನು ಹಣ ಕಟ್ಟಿಸಿಕೊಳ್ಳದೇ ಹಿಂದಿರುಗಿಸಿ ಕಳುಹಿಸಿದರು ನಂತರ ಮಂಜನಾಯ್ಕ ಯಾವಾಗ ಹಣ ಕಟ್ಟಿದರು ಎಂದು ನಮಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.  ತಹಶೀಲ್ದಾರವರ ಅಹವಾಲು ತಖ್ತೆಯಲ್ಲಿ ಪ್ರತಿವಾದಿಯರು 5 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ ಎಂದು ನಮೂದು ಇದೆ ಎಂದರೆ ಸಾಕ್ಷಿಯು ನಮ್ಮ ಅಕ್ಕಪಕ್ಕದ ಜಮೀನಿನವರಿಗೆ ನಾವು ಸಾಗುವಳಿ ಮಾಡುತ್ತಿದ್ದೇವೆ ಎಂದು ಗೊತ್ತಿದೆ ಎಂದು ಹೇಳುತ್ತಾರೆ.  ಎಲ್ಲಾ ದಾಖಲೆಗಳ ಪ್ರಕಾರ ಪ್ರತಿವಾದಿಯರು 5 ಎಕರೆ ಜಮೀನಿನ ಸ್ವಾಧೀನತೆ ಹೊಂದಿದ್ದಾರೆ ಎಂದರೆ ಸರಿಯಲ್ಲ.  ಪ್ರತಿವಾದಿಗಳ ಜಮೀನನ್ನು ಲಪಾಟಯಿಸಬೇಕು ಎಂದು ಸುಳ್ಳು ದಾಖಲೆ ಸೃಷ್ಟಿ ಮಾಡಿ ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನಮ್ಮ ಅಜ್ಜ ಅಜ್ಜಿ ಜಮೀನನ್ನು ಯಾವತ್ತೂ ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ.  ದಾವಾ ಆಸ್ತಿಯು ಸರ್ಕಾರಿ ಆಸ್ತಿ ಯಾಗಿದ್ದು , ಗೋಮಾಳ, ಮನ್ನಾ ಜಂಗ್ಲಿ ಆಗಿದ್ದು ಹಾಗಾಗಿ ನಮಗೆ ಈ ದಾವೆ ಹಾಕಲು ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.  ಈ ದಾವೆ ಹಾಕಲು ನಮಗೆ ಯಾವುದೇ ವ್ಯಾಜ್ಯ ಕಾರಣ ಉಂಟಾಗಿಲ್ಲ ಆದರೂ ಸುಳ್ಳು ವ್ಯಾಜ್ಯ ಕಾರಣ ತೋರಿಸಿದ್ದೇವೆ ಎಂದರೆ ಸರಿಯಲ್ಲ.  ನಾವು ಪ್ರತಿವಾದಿಗಳ ಜಮೀನಿನ ಪಕ್ಕ ಯಾವತ್ತೂ ಬಗರ ಹುಕುಂನ ಜಮೀನನ್ನು ಸಾಗುವಳಿ ಮಾಡಿಲ್ಲ,  ಈಗಲೂ ಮಾಡುತ್ತಾ ಇಲ್ಲ ಎಂದರೆ ಸರಿಯಲ್ಲ.  ನಾನು ಸುಳ್ಳು ದಾವೆ ಹಾಕಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.  ನನ್ನ ಮುಖ್ಯ ವಿಚಾರಣೆಯಲ್ಲಿರುವ ಸಂಗತಿಗಳು ಸುಳ್ಳಿನಿಂದ ಕೂಡಿವೆ ಹಾಗೂ ನಾನು ಸುಳ್ಳು ದಾಖಲೆ ಸೃಷ್ಟಿ ಮಾಡಿ ಸುಳ್ಳು ಸಾಕ್ಷ್ಯ

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಕಾಫಿ ಎಸೇಟ್ ನಲ್ಲಿ 15 ವರ್ಷ ಹಾಗೂ ಹರಿಹರದಲ್ಲಿ 15 ವರ್ಷ ವಾಸವಾಗಿದ್ದರಿಂದ ಪ್ರತಿವಾದಿಗಳ ಜಮೀನಿನ ಪಕ್ಕ ಯಾವತ್ತೂ ಜಮೀನನ್ನು ಸಾಗುವಳಿ ಮಾಡಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ. ಶಿಕಾರಿಪುರ.